# ಅಂತಾರಾಷ್ಟ್ರೀಯ ಸಮ್ಮೇಳನಕ್ಕೆ ಚಾಲನೆ

ಸಂ.ಕ.ಸಮಾಚಾರ,ಮಂಗಳೂರು

ಇಂಜಿನಿಯರಿಂಗ್‌ನಲ್ಲಿನ ಇತ್ತೀಚಿನ ಪ್ರಗತಿಗಳು ಮತ್ತು ಆವಿಷ್ಕಾರಗಳ ಕುರಿತು 7ನೇ ಐಇಇಇ ಇಂಟರ್ನ್ಯಾಷನಲ್ ಕಾನ್ಫರೆನ್ಸ್ ಅನ್ನು ಐಇಇಇ ವಿದ್ಯಾರ್ಥಿ ಶಾಖೆಯು ಸುರತ್ಕಲ್‌ನ ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಕರ್ನಾಟಕ (ಎನ್‌ಐಟಿಕೆ) ನಲ್ಲಿ ಐಇಇಇ ಬೆಂಗಳೂರು ವಿಭಾಗ ಮತ್ತು ಐಇಇಇ ಮಂಗಳೂರು ಉಪ ವಿಭಾಗದ ಸಹಯೋಗದೊಂದಿಗೆ ಹಮ್ಮಿಕೊಂಡಿದೆ.



ಇಸಿಇ, ಇಇಇ, ಸಿಎಸ್‌ಇ ಮತ್ತು ಐಟಿ ನಂತಹ ಸರ್ಕ್ಯೂಟ್ ಶಾಖೆಗಳಿಗೆ ಸಂಬಂಧಿಸಿದ ವಿವಿಧ ಕ್ಷೇತ್ರಗಳಲ್ಲಿ ಸಂಶೋಧನಾ ಪ್ರಬಂಧಗಳನ್ನು ಆಹ್ವಾನಿಸಲಾಯಿತು. ಎಲ್ಲಾ ಮೂರು ಟ್ರ್ಯಾಕ್‌ಗಳಲ್ಲಿ ಒಟ್ಟು 343 ಪೇಪರ್‌ಗಳನ್ನು ಸ್ವೀಕರಿಸಲಾಯಿತು ಅವುಗಳಲ್ಲಿ 93 ಪ್ರಬಂಧಗಳನ್ನು ಆಯ್ಕೆ ಮಾಡಲಾಯಿತು. ದೇಶದ ವಿವಿಧ ಹೆಸರಾಂತ ವಿಶ್ವವಿದ್ಯಾನಿಲಯಗಳ ವಿವಿಧ ಕ್ಷೇತ್ರಗಳ ಒಟ್ಟು 191 ವಿಮರ್ಶಕರು ಮತ್ತು ತಜ್ಞರು ಪರಿಶೀಲನಾ ಪ್ರಕ್ರಿಯೆಯಲ್ಲಿ ಭಾಗವಹಿಸಿದ್ದರು.

ವಿವಿಧ ಕ್ಷೇತ್ರಗಳಲ್ಲಿ ಪ್ರಬಂಧಗಳನ್ನು ಮಂಡಿಸಲು 15 ಸಮಾನಾಂತರ ಅಧಿವೇಶನಗಳು ನಡೆಯಲಿವೆ. ಈ ಸಮ್ಮೇಳನವನ್ನು ಹೈಬ್ರಿಡ್ ಮೋಡ್‌ನಲ್ಲಿ ಆಯೋಜಿಸಲಾಗಿದೆ. ಸಮ್ಮೇಳನಕ್ಕೆ ಎನ್‌ಐಟಿಕೆ ಎಲ್‌ಹೆಚ್‌ಸಿಸಿ ಸೆಮಿನಾರ್ ಹಾಲ್ ಇಂದು ಚಾಲನೆ ನೀಡಲಾಯಿತು. ನಿರ್ದೇಶಕ (ಐ/ಸಿ) ಪ್ರೊ.ಜೆ.ಸಿ. ಮೋಹನ್ ಕುಮಾರ್ ಅಧ್ಯಕ್ಷತೆ ವಹಿಸಿದ್ದರು. ಅಮೇರಿಕಾದ ಸದರ್ನ್ ಜಾರ್ಜಿಯಾ ವಿವಿ.ನಿಲಯದ ಪ್ರೊ.ವಿ.ಎಲ್.ಎನ್. ಸಿಂಹನ್ ಗೌರವ ಅತಿಥಿಗಳಾಗಿದ್ದು, ಐಬಿಎಂ ಕ್ಲೌಡ್ ನ ಸಾಫ್ಟ್ ವೇರ್ ಆರ್ಕಿಟೆಕ್ಟ್ ಶ್ರೀಹರಿ ಕುಲಕರ್ಣಿ ಮುಖ್ಯ ಅತಿಥಿಯಾಗಿದ್ದರು. ಪ್ರೊ.ವಿ.ಎಲ್.ಎನ್ .ಸಿಂಹನ್, ಪ್ರೊ.ಮಾರ್ಸಿನ್ ಪಾಪ್ರಿಜೆಕಿ, ಶ್ರೀಹರಿ ಕುಲಕರ್ಣಿ ಮಾಹಿತಿ ನೀಡಿದರು.